# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಂದಾಯ ಅಧಿಕಾರಿಗಳ ಕಛೇರಿ, ಹೊರಮಾವು ಉಪ ವಲಯ,**

**ಮಹದೇವಪುರ ವಲಯ ಬೆಂಗಳೂರು-43.**

ಸಂಖ್ಯೆ.ಬಿಬಿಎಂಪಿ/ಸಕಂಅಹೊಉವ/(ಸಿಬ್ಬಂದಿ)ಪಿಆರ್/21/2020-21 ದಿನಾಂಕ: 01/10/2022

***ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/ 2020-21 ದಿನಾಂಕ:21/09/2020 ಹಾಗೂ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರು ದಿನಾಂಕ:-01/10/2022 ರಂದು ಹೊರಮಾವು ಉಪ-ವಿಭಾಗದ ಕಲ್ಕೆರೆ ವಾರ್ಡ್-83ರ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.***

**ಉಪಸ್ಥಿತರು:**

| ಕ್ರ.ಸಂ | ಹೆಸರು | ಹುದ್ದೆ | ಮೊ.ನಂ |
|---|---|---|---|
| 1 | ಶ್ರೀ.ಬಸವ ಚಾರಿ | ನೋಡಲ್ ಅಧಿಕಾರಿ ವಾರ್ಡ್ ನಂ-83 | |
| 2 | ಶ್ರೀ. ಚಂದ್ರಶೇಖರ್ | ಸಹಾಯಕ ಕಾರ್ಯಪಾಲಕ ಅಭಿಯಂತರರು | 9844587466 |
| 3 | ಶ್ರೀ. ರಮೇಶ್ | ಸಹಾಯಕ ಅಭಿಯಂತರರು/ವಾರ್ಡ್ ನೊಡೆಲ್ ಅಧಿಕಾರಿ | 9480685868 |
| 4 | ಶ್ರೀ.ವಿಕ್ರಮ್ ಸಜ್ಜನ್ ಶೆಟ್ಟಿ | ಸಹಾಯಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿ ವಾರ್ಡ್ ನಂ-83 | 9739838297 |
| 5 | ಶ್ರೀಮತಿ. ವಿಶ್ವನಾಥ್, | ಆರೋಗ್ಯ ಅಧಿಕಾರಿಗಳು, ವಾರ್ಡ್ ಸಂಖ್ಯೆ.83, | 9916609413 |
| 6 | ಶ್ರೀ ವೀರೇಶ್ | ಬೆಸ್ಕಾಂ ಕಿರಿಯ ಅಭಿಯಂತರರು | 9449869317 |
| 7 | ಶ್ರೀ ಆನಂದ | ಬಿ.ಡ್ಲೂ.ಡ್ಲೂ.ಎಸ್.ಎಸ್.ಬಿ ಕಿರಿಯ ಅಭಿಯಂತರರು | 7090216187 |
| 8 | ಶ್ರೀ. ಚಂದ್ರಕಲಾ | ಕಿರಿಯ ಆರೋಗ್ಯ ಪರಿವೀಕ್ಷಕರು | 9620101648 |
| 9 | ಶ್ರೀ. ಜಯರಾಮ್, | ಕಂದಾಯ ಅಧಿಕಾರಿ | 9663954692 |
| 10 | ಶ್ರೀ.ಚಿಟ್ಟಿಬಾಬು, ಸಹಾಯಕರು, | ಅರಣ್ಯ ಬಿ.ಬಿ.ಎಂ.ಪಿ | 9945430665 |
| | | ಸಾರ್ವಜನಿಕರು | |
| 12 | ಶ್ರೀ. ಸಿದ್ದಯ್ಯ ಮತ್ತು ಅನಂದನ್ | ಟ್ರೀನಿಟಿ ಬಡಾವಣೆ | – |
| 13 | ಶ್ರೀ.ಬಸವರಾಜ.ಕೆ | ಪುಣ್ಯಭೂಮಿ | – |
| 14 | ಶ್ರೀ.ಮಂಜು | ಕನಕನಗರ | – |
| 15 | ಶ್ರೀ. ಸತೀಶ್ | ಬಂಜಾರ ಬಡಾವಣೆ | – |
| 16 | ಅರುಣ್ | ಎಸ್ಟರ್ ಎನ್‌ಕ್ಲೆವ್ | – |

ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.83 ರ ವ್ಯಾಪ್ತಿಯಲ್ಲಿ ಅಭಿವೃದ್ದಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲೂಎಸ್ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

<u>ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:–</u>

<u>ಶ್ರೀ ಮಂಜುನಾಥ ಕನಕನಗರ ಗ್ರಾಮ:–</u> ರವರು ಮಾತನಾಡಿ ಈಗಾಗಲೇ ಕನಕನಗರ ಗ್ರಾಮದ ಮುಖ್ಯರಸ್ತೆ ಕನಕನಗರ ಸರ್ಕಾರಿ ಶಾಲೆಯ ಮುಂಬಾಗ ಅತಿವೇಗವಾಗಿ ವಾಹನಗಳು ಬರುತ್ತಿದ್ದು, ಅಪಘಾತಗಳು ಸಂಭವಿಸುತ್ತಿರುವುದರಿಂದ ಪರಿಶೀಲಿಸಿ ರಸ್ತೆಯ ಉಬ್ಬುಗಳನ್ನು ಅಳವಡಿಸಲು ಕೋರಿರುತ್ತಾರೆ.

<u>ಕ್ರಮ</u>:– ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

<u>ಶ್ರೀ.ಆನಂದ್ ಇತರರು, ಪುಣ್ಯ ಭೂಮಿ ವೆಲ್‌ಫೇರ್ ಅಸೋಸಿಯೇಷನ್:–</u> ರವರು ಮಾತನಾಡಿ 7ನೇ ಮುಖ್ಯ ರಸ್ತೆಯ ಬೋರವೆಲ್‌ನಲ್ಲಿ ತುಂಬಾ ನೀರಿದ್ದು ,ಗೇಟ್ ವಾಲ್ ಅಳವಡಿಸಿ ಪ್ರತಿನಿತ್ಯ ಒಂದು ಗಂಟೆ 5ನೇ ಮುಖ್ಯ ರಸ್ತೆಗೆ ನೀರು ಬಿಡುವಂತೆ ಪಾಲಿಕೆ ಅಧಿಕಾರಿಗಳಿಗೆ ಕೋರಿಕೊಂಡಿರುತ್ತಾರೆ.

ಕ್ರಮ:– ಸಹಾಯಕ ಅಭಿಯಂತರರು, ರವರು ಸದರಿ ಸ್ಥಳ ಪರಿಶೀಲಿಸಿ ಸದರಿ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು. ಸಹಾಯಕ ಅಭಿಯಂತರರುಗಳು, ಬೃಹತ್ ರಸ್ತೆಗಳ ವಿಭಾಗ, ಸಹಾಯಕ ಅಭಿಯಂತರರು ಬೆಸ್ಕಾಂ–ದೂರವಾಣಿನಗರ, ಸಹಾಯಕ ಅಭಿಯಂತರರು ಬೆಂಗಳೂರು ಅಬಿವೃದ್ಧಿ ಪ್ರಾಧಿಕಾರ ರವರಿಗೆ ಈ ದಿನ ಸಭೆಗೆ ಹಾಜರಾಗಲು ಸೂಚಿಸಿದ್ದರೂ ಸಹ ಸದರಿ ರವರು ಗೈರುಹಾಜರಾಗಿದ್ದು, ಈ ಕುರಿತು ಸಾರ್ವಜನಿಕರು ಸಭೆಗೆ ಹಾಜರಾಗದ ಅಧಿಕಾರಿಗಳ ವಿರುದ್ಧ ಅಸಮಧಾನ ವ್ಯಕ್ತಪಡಿಸಿ ಮುಂದಿನ ಸಭೆಯಲ್ಲಿ ಎಲ್ಲರೂ ಹಾಜರಾಗಲೂ ಕ್ರಮಕೈಗೊಳ್ಳಲು ಕೋರಿಕೊಂಡಿದ್ದು, ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ನೋಡಲ್ ಅಧಿಕಾರಿ ರವರು ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ದಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರ

<u>ಸತೀಶ್ ಚಂದ್ರ ಬಂಜಾರ್ ಬಡಾವಣೆ :–</u> ರವರು ಮಾತನಾಡಿ, ಕನಕಗಿರಿ ಮುಖ್ಯ ರಸ್ತೆಯಲ್ಲಿ ತುಂಬಾ ಗುಂಡಿಗಳು ಬಿದ್ದಿದ್ದು ಕೂಡಲೇ ಗುಂಡಿ ಮುಚ್ಚಬೇಕೆಂದು ಸಭೆಯಲ್ಲಿ ತಿಳಿಸಿದರು.

<u>ಕ್ರಮ</u>:– ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

2) ಬಂಜಾರ ಬಡಾವಣೆಯ ಕನಕಗಿರಿ ಮುಖ್ಯ ರಸ್ತೆಯಲ್ಲಿ ಗಿಡಗಳು ವಿಪರೀತ ಹಾಗಿದ್ದು, ಕೂಡಲೇ ಸ್ವಚ್ಚಗೊಳಿಸಿಕೊಡುವುದಾಗಿ ತಿಳಿಸಿದರು.

<u>ಕ್ರಮ</u>:– ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸ.ಕಾ.ಅ ಹೊರಮಾವು ರವರು ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಶ್ರೀ. ರಮೇಶ್
ನೋಡೆಲ್ ಅಧಿಕಾರಿ ವಾರ್ಡ್ ಸಂಖ್ಯೆ-83
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಶ್ರೀ.ವಿಕ್ರಮ್ ಸಜ್ಜನ್ ಶೆಟ್ಟಿ
ಸಹಾಯಕ ಅಭಿಯಂತರರು ರಾಮಮೂರ್ತಿನಗರ ವಾರ್ಡ್
ಸಂಖ್ಯೆ-83
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-

1.ಕೌನ್ಸಿಲ್ ಕಾರ್ಯದರ್ಶಿ ರವರ ಆವಗಾಹನೆಗೆ ಮಂಡಿಸಲಾಗಿದೆ.
2.ಕಛೇರಿ ಪ್ರತಿ